ದೇವರು ಎಂದು ಎಲ್ಲರೂ ಒಪ್ಪುತ್ತಾರೆ. ಆದರೆ ನಾನು ಕೆಲಸ ಮಾಡುತ್ತಿದ್ದ ಊರಿನ ಹೋಟೆಲೊಂದರಲ್ಲಿ 'ನೀವು ದೇವರೇ ಇರಬಹುದು. ಆದರೆ ನಮ್ಮ ನಿಯಮಗಳನ್ನು ಪಾಲಿಸಬೇಕು' ಎಂಬಂತೆ ಆ ಮಾಲೀಕರು. ನನ್ನ ಸಹೋದ್ಯೋಗಿ ಅದರ ಕಾಯಂ ಫಲಾನುಭವಿ. ಆ ಹೋಟೆಲಿನಲ್ಲಿ ದೊಡ್ಡದಾಗಿ ಮಾತನಾಡಿ ಉಳಿದವರಿಗೆ ಡಿಸ್ಟರ್ಬ್ ಮಾಡುವಂತಿಲ್ಲ. ಎರಡೆರಡು ಸಲ ಕೇಳುವಂತಿಲ್ಲ. ಕಾಲು ಅಗಲಿಸಿಕೊಂಡು ಕೂತು ಸಪ್ಲೇಯರ್‌ಗಳ ಓಡಾಟಕ್ಕೆ ಅಡ್ಡಿ ಮಾಡುವಂತಿಲ್ಲ. ಅವರು ತಂದಾಗ ಮಾತ್ರ ಹಾಕಿಸಿಕೊಳ್ಳಬೇಕು ಇತ್ಯಾದಿ. ಇದರಲ್ಲಿ ವ್ಯತ್ಯಯವಾದರೆ ಅವನು ಗದರಬಹುದು. ಮರುಮಾತಿಲ್ಲದೆ ಗದರಿಸಿಕೊಳ್ಳಬೇಕು. ಮಿತಭಾಷಿಯೂ, ಪೂರ್ ಈಟರೂ ಆದ ನನ್ನ ಮಿತ್ರರಿಗೆ ಇದರಿಂದ ಏನೂ ಸಮಸ್ಯೆಯಾಗಲಿಲ್ಲ. ನನ್ನನ್ನು ಒಂದು ದಿವಸ ಅವರು ಅಲ್ಲಿಗೆ ಊಟಕ್ಕೆ ಕರೆದುಕೊಂಡು ಹೋಗಿದ್ದರು. ಇದನ್ನೆಲ್ಲ ಕೇಳಿದ್ದ ನಾನು ಊಟಕ್ಕಿಂತ ಮರ್ಯಾದೆ ಮುಖ್ಯ ಎಂದು ಚೆನ್ನೈಯಲ್ಲಿಯೂ ಪಾಲಿಸಿದ್ದ ನಾನು ಅವನು ಹಾಕಿದ್ದು ಮತ್ತು ಹಾಕಿದಷ್ಟನ್ನು ಮಾತ್ರ ತಿಂದು ತುಟಿ ಬಿಚ್ಚದೆ ಎದ್ದು ಬರಬೇಕೆಂದು ಮೊದಲೇ ತೀರ್ಮಾನಿಸಿದ್ದೆ. ಊಟ ಹೇಗಿತ್ತು? ಎಂದು ಕೇಳಿದರು ಮಿತ್ರರು. 'ಗೊತ್ತಾಗಲಿಲ್ಲ. ಆದರೆ ಪರೀಕ್ಷೆ ಟಫ್ ಇತ್ತು' ಎಂದೆ. ಈಗ ಆ ಮಿತ್ರರು ಇನ್ನೊಂದು ಊರಿನಲ್ಲಿದ್ದಾರೆ. ಅಲ್ಲಿ ಮೆಸ್ ಒಂದನ್ನು ನೆಚ್ಚಿಕೊಂಡಿದ್ದಾರೆ. ಒಂದು ವಾರ ಊಟ ಮಾಡಿದ ಮಿತ್ರರಿಗೆ ಮೆಸ್‌ನ ಮಾಲೀಕಳು ಊಟ ಮಾಡುವಾಗ ನನ್ನನ್ನೇ ನೋಡುತ್ತಾಳಲ್ಲ ಎಂದು ಕಸಿ ವಿಸಿ. ಯಾರಲ್ಲೂ ಹೇಳಿಕೊಳ್ಳುವಂತಿಲ್ಲ. ಒಂದು ದಿನ ಊಟ ಮುಗಿಸಿ ದುಡ್ಡು ಕೊಟ್ಟ ಅವರನ್ನು ಕರುಣಾಜನಕವಾಗಿ ನೋಡುತ್ತಿದ್ದ ಆ ಮಹಾತಾಯಿ 'ಅಣ್ಣಾವ್ರೇ ನೀವು ಮಾಡೋ ಊಟಕ್ಕೆ ಇಪ್ಪತ್ತೈದು ರೂಪಾಯಿ ಸಾಕು. ಇನ್ನು ಮೇಲೆ ಅಷ್ಟೇ ಕೊಡಿ' ಎಂದು ಉಳಿದ ಇಪ್ಪತ್ತು ವಾಪಸು ಕೊಟ್ಟಳಂತೆ. ಹೀಗೂ ಉಂಟೇ? ಹೋಟೆಲಿನ ಗಾಜಿನ ಕಪಾಟಿನ ಒಳಗೆ ಎಲ್ಲರಿಗೂ ಕಾಣಲಿ ಎಂದು ಇಟ್ಟಿದ್ದ ಜಾಮೂನು ತಟ್ಟೆಯನ್ನೇ ಹೋಟೆಲು ಬಾಗಿಲಾಚೆ ನಿಂತು ನೋಡುತ್ತಿದ್ದ ಹುಡುಗನೊಬ್ಬನಿಗೆ ಮಾಲೀಕ ಕೆನ್ನೆಗೆ ಎರಡು ತಟ್ಟಿ ಕಳಿಸಿದ್ದ ಹಳೆಯ ನೆನಪೊಂದು ಈಗ ಬರುತ್ತಿದೆ. ಆ ಮಾಲೀಕ ಅವನಿಗೆ ಏಟಿನ ಬದಲು ಎರಡು ಜಾಮೂನು ಕೊಟ್ಟು ಕಳುಹಿಸಬಹುದಿತ್ತೇನೋ ಎಂದು ಮನಸ್ಸಿಗೆ ಈಗಲೂ ಅನಿಸುತ್ತಿದೆ. ಅವನೆಲ್ಲಿ? ದುಡ್ಡು ವಾಪಸ್ ಕೊಟ್ಟ ಈಕೆಯೆಲ್ಲಿ? ಆದರೆ ಜಾಸ್ತಿ ಊಟ ಮಾಡುವವರಿಗೆ ಜಾಸ್ತಿ ಚಾರ್ಜ್ ಮಾಡುತ್ತಾಳಾ ಆಕೆ ಎಂಬುದು ಗೊತ್ತಿಲ್ಲ.

ಮನೆ ಬಿಟ್ಟು ಬಂದ ಹುಡುಗರಿಗೆ ಮೊದಲ ಆಶ್ರಯ ತಾಣವೇ ಹೋಟೆಲುಗಳು. ಮನೆಯಿದ್ದೂ ಒಂಟಿಯಾಗಿ ಇರಬೇಕಾದವರನ್ನು ಸಾಕುವುದು, ಅವರ ಆರೋಗ್ಯಾತಿಶಯಗಳನ್ನು ಕಾಪಾಡುವುದು ಇವುಗಳ ಜವಾಬ್ದಾರಿ. ಒಂದು ಬೈಟೂ ಕಾಫಿ ಕುಡಿಸುವಲ್ಲಿ ಎಷ್ಟು ಸಂಸಾರಗಳ ಕತೆಗಳನ್ನು ಕೇಳಿಸಿಕೊಂಡಿವೆಯೋ ಇವು. ಬೈಟೂ ಅಂದಾಗ ನೆನಪಾಯಿತು. ಬಹಳ ಹಿಂದೆ ನನ್ನ ಆಪ್ತ ಮಿತ್ರನಿಗೆ ಬೈಟೂ ಕಾಫಿ ಅಂದರೆ ಗೊತ್ತಿರಲಿಲ್ಲ. ಟೂಬೈಟೂ ಅಂತ ಬಟ್ಟೆ ಇರುವಂತೆ ಕಾಫಿಯಲ್ಲಿಯೂ ಇದೊಂದು ಥರ ಎಂದು ತಿಳಿದಿದ್ದ. ಒಂದು ದಿನ ಅದೇನು ನೋಡಲೇಬೇಕು ಎಂದು ತೀರ್ಮಾನಿಸಿಕೊಂಡು ಹೋಟೆಲಿಗೆ ಹೋದವನೇ 'ಬೈಟೂ ಕಾಫಿ' ಎಂದು ಆರ್ಡರ್ ಮಾಡಿದ. ಚಕಿತಗೊಂಡ ಮಾಣಿ ಮತ್ತೊಬ್ಬರು ಬರಬಹುದು ಎಂದು ತಿಳಿದು ಎರಡು ಕಪ್‌ಗಳಲ್ಲಿ ಕಾಫಿ ತಂದಿಟ್ಟ. 'ಇನ್ನೊಬ್ಬರು?...' ಎಂದು ಕೇಳಿದ. 'ಅಯ್ಯೋ ಹಿಂಗಾ' ಎಂದು ಅಭಿಮಾನ ಭಂಗಗೊಂಡ ಮಿತ್ರ 'ಯಾರು ಯಾಕಯ್ಯ... ನೀನು ಇಟ್ಟು ಹೋಗು' ಎಂದು ಜೋರು ಧ್ವನಿಯಲ್ಲಿ ಹೇಳಿದ. ವಿಚಿತ್ರಪ್ರಾಣಿಯೆಂಬಂತೆ ಸಪ್ಲೇಯರ್ ಇವನನ್ನೇ ನೋಡಿಕೊಂಡು